**3.2.2 Average number of books and / or chapters in edited books published and papers in National / International conference-proceedings per teacher during the last five years**

| Year | Title of the book/chapters published | Title of the paper | Name of the conference | National / international | Year of publication | ISBN number of the proceedings | Affiliating Institution of teacher at the time of publication | Name of publisher | Relavant link |
|---|---|---|---|---|---|---|---|---|---|
| 2020-21 | Different Philosophical Streams in Ancient Karnataka and Historical Records | | | National | 2021 | 978-81-952869-7-3 | Guru Nanak College of Education, Bidar | S.S Bhavikatti Prakashana Kalburgi | |
| 2021-22 | A study on problem solving ability of pre-univercity level students in relation to some selected variables. | | | International | 2022 | 978-1-4583-3900-3 | Guru Nanak College of Education, Bidar | LULU Publication | |


PRINCIPAL
Gurunanak College of Education
BIDAR-585403

### 3.2.2 Average number of books and / or chapters in edited books published and papers in National / International conference-proceedings per teacher during the last five years

| Year | Title of the book/chapters published | Title of the paper | Name of the conference | National / international | Year of publication | ISBN number of the proceedings | Affiliating Institution of teacher at the time of publication | Name of publisher | Relavant link |
|---|---|---|---|---|---|---|---|---|---|
| 2020-21 | Different Philosophical Streams in Ancient Karnataka and Historical Records | | | National | 2021 | 978-81-952869-7-3 | Guru Nanak College of Education, Bidar | S.S Bhavikatti Prakashana Kalburgi | |
| 2021-22 | A study on problem solving ability of pre-univercity level students in relation to some selected variables. | | | International | 2022 | 978-1-4583-3900-3 | Guru Nanak College of Education, Bidar | LULU Publication | |

PRINCIPAL
Gurunanak College of Education
BIDAR

# A STUDY ON PROBLEM SOLVING ABILITY OF PRE-UNIVERSITY LEVEL STUDENTS IN RELATION TO SOME SELECTED VERIABLES




**Dr. Rajashekhara**

Scanned by CamScanner
PRINCIPAL
Gurunanak College of Education
BIDAR-585403

# A STUDY ON PROBLEM SOLVING ABILITY OF PRE-UNIVERSITY LEVEL STUDENTS IN RELATION TO SOME SELECTED VERIABLES

Dr. Rajashekhara

LULU PUBLICATION
2022

Scanned by CamScanner

PRINCIPAL
Gurunanak College of Education
BIDAR-585403

Price: 500/-

A STUDY ON PROBLEM SOLVING ABILITY OF PRE-UNIVERSITY LEVEL STUDENTS IN RELATION TO SOME SELECTED VERIABLES

Dr. Rajashekhara

© 2022 by Author
All rights reserved. No part of this publication may be reproduced or transmitted, in any form or by any means, without prior permission of the author. Any person who does any unauthorized act in relation to this publication may be liable to criminal prosecution and civil claims for damages. [The responsibility for the facts stated, conclusions reached, etc., is entirely that of the author. The publisher is not responsible for them, whatsoever.]

ISBN–978-1-4583-3900-3

**Published by,**
**Lulu Publication**
3101 Hillsborough St,
Raleigh, NC 27607,
United States.

**Printed by,**
**Laxmi Book Publication,**
258/34, Raviwar Peth,
Solapur, Maharashtra, India.
**Contact No. :** 9595359435
**Website:** http://www.lbp.world
**Email ID:** apiguide2014@gmail.com

PRINCIPAL
Gurunanak College of Education
BIDAR-585403
Scanned by CamScanner

# About the Author



## Dr. Rajashekhara

Dr. Rajashekhara S% Basawanappa Almaje has a very good academic background with the Educational qualification M.A., M.Ed., M.phil., Ph.D., PGDHE.,UGC NET in Education and K-SET in History. Initially stared his service in a high school in 2001 and served for 5 years then he entered into teacher education and served as lecturer in education in 2007 and served for 3 years. After this he entered into PG level in 2010 and served as Assistant Professor at KRE'S M Ed PG college Bidar for 5 years. The he started his work in administration and working as Principal in B.Ed college in 2016 to till date, presently he is working as principal at Guru Nanak College of Education Bidar. He was awarded Ph.D degree for his thesis entitled " A study on Problem Solving Ability of P U level students in relation to some selected veriables." Under the guidance of Dr.Hoovinbhavi B L Professor in Education, P G Department of studies and Research in Education, Gulbarga University Kalaburgi in 2016. Dr.Rajashekhara has worked as academic counselor and work shop fecilitator and evaluator in IGNOU study center for B Ed programme.

Dr. Rajashekhara has presented 04 papers in world conferences held at NEPAL, BHUTAN and Amritsar Punjab and 04 papers in International conferences held at Mysore of Karanataka and GOA. Apart from this he is presented more than 10 papers in National conferences held across the country. And presented 05 papers in national seminars and 03 in state seminars.

In the publication work also the author contributed with 09 research and thematic papers in the reputed journals with ISSN No. and he published 04 chapters in edited book with ISBN Nos along with this the author has participated in several national and state level Work Shops also.

In his academic work the author covered the various areas of education such as philosophical aspects, pedagogic aspects, reflective Education, collaborative education, teacher education, higher education, inclusive education, education for disables, psychological aspects such as creativity, intelligence, problem solving ability, study habits, emotional intelligence, pedagogy, content analysis, ICT based education etc.

Published by

.com
3101, Hillsborough St,
Raleigh, NC 27607,
United States.

9 781458 339003

Ravikiran

PRINCIPAL
Gurunanak College of Education
BIDAR-585403

Scanned by CamScanner

ISBN No. 978-81-952869-7-1

# ಪದವಿ ಹಂತದಲ್ಲಿ ಶಾಸನೋಕ್ತ ದಾಖಲೆಗಳ ಬೋಧನೆ - ಒಂದು ವಿಶದೀಕರಣ

ಡಾ. ರಾಜಶೇಖರ ಅಲ್ಲಾಚೆ[1] ಮತ್ತು ಪಾಂಡುರಂಗ ಕುಂಬಾರೆ[2]

**ಉದ್ದೇಶಗಳು:**

1. ಶಾಸನದ ಅರ್ಥ ಮತ್ತು ವ್ಯಾಖ್ಯೆಗಳನ್ನು ಅರ್ಥಮಾಡಿಕೊಳ್ಳುವುದು.
2. ಶಾಸನದ ವ್ಯಾಪ್ತಿ ಮತ್ತು ಮಹತ್ವವನ್ನು ತಿಳಿದುಕೊಳ್ಳುವುದು.
3. ಶಾಸನಗಳ ಪ್ರಕಾರಗಳನ್ನು ವಿಮರ್ಶಿಸುವುದು.
4. ಕರ್ನಾಟಕ ಶಾಸನಗಳನ್ನು ವಿಶ್ಲೇಷಿಸುವುದು.

**ಪ್ರಸ್ತಾವನೆ:**

ಶಾಸನಬವೆಂಬುದು ಆಜ್ಞೆ, ಪ್ರಜೆಗಳೆಲ್ಲರೂ ಪಾಲಿಸಬೇಕಾದ ಒಂದು ಸಂಹಿತೆ, ಸಂವಿಧಾನ. ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗುತ್ತೀರೆಂಬ ಎಚ್ಚರಿಕೆಯ ನೀತಿ ಸಂಹಿತೆಗಳು ಎಂಬ ಅರ್ಥ ಪಡೆದುಕೊಂಡಿತು. ಅಶೋಕನು ತಾನು ಹಾಕಿದ ಶಾಸನಗಳನ್ನು 'ಧರ್ಮಲಿಪಿ'ಗಳೆಂದು ಕರೆದುಕೊಂಡಿದ್ದಾನೆ. ಅಂದರೆ 'ಖಟಿಥಿಡಿಟಿಥಜ' ಎಂಬುದರಿಂದ ಹೊರಟ ಕೆತ್ತು, ಕೊರೆ, ಕಂಡರಿಸು ಎಂಬ ಅರ್ಥಕ್ಕಿಂತ ಭಿನ್ನವಾಗಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ, ನಿಗ್ರಹ, ಒಡಿತ, ಶಿಕ್ಷೆ, ದಂಡನೆ, ಶಾಸ್ತಿ, ಒಪ್ಪಂದ ಮತ್ತು ಕರಾರು ಎಂಬ ವ್ಯಾಪಕ ಅರ್ಥವನ್ನು ಶಾಸನ ಪಡೆದುಕೊಂಡಿತು.

ರಾಜನ ಸಹಿ, ಮುದ್ರೆ, ದಿನಾಂಕದೊಂದಿಗೆ ಅಧಿಕೃತವಾಗಿ ಹೊರಟ ಶಾಸನಗಳು ಶಿಲೆ, ತಾಮ್ರ, ಕಬ್ಬಿಣ ಇತ್ಯಾದಿ ಮಾಧ್ಯಮಗಳಲ್ಲಿ ಬರೆದಿರುವ ರಾಜಾಜ್ಞೆಗಳಾಗಿದ್ದಂತೆ, ರಾಜರಲ್ಲದವರು ಕುರಿತು ಬರೆಯಿಸಿದಾಗಲೂ ಅವು ಶಾಸನಗಳೆಂದು ಕರೆಯಿಸಿಕೊಂಡವು. ವೀರರ, ಮಹಾಸತಿಯರ, ಸನ್ಯಾಸಿಗಳ ಮರಣ ವೃತ್ತಾಂತವನ್ನು ಉಲ್ಲೇಖಿಸುವ ವೀರಗಲ್ಲು, ಮಾಸ್ತಿಕಲ್ಲು, ನಿಸಿದಿಕಲ್ಲುಗಳ ಸಹ ಶಾಸನ ಪರಂಪರೆಗೆ ಸೇರಿದವು.

**ಶಾಸನದ ಅರ್ಥ:** 'ಶಾಸ್' ಎಂಬ ಧಾತುವಿನಿಂದ 'ಶಾಸನ' ಎಂಬ ಪದ ರೂಪುಗೊಂಡಿದ್ದು, ಅದು ಅಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥ ಹೊಂದಿದೆ. ಶಾಸನಗಳು ಮೂಲತಃ ದಾನ ಸಂಬಂಧವಾದ ರಾಜಾಜ್ಞೆಗಳಾಗಿದ್ದವು. ಈ ಅರ್ಥದಲ್ಲಿ ಶಾಸನಗಳೆಂದರೆ ದಾನ ಶಾಸನಗಳೇ.

'Inscription' ಎಂದರೆ ಬಹುಕಾಲ ನಿಲ್ಲಬಲ್ಲ, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹ. ಕಲ್ಲು, ತಾಮ್ರ, ಬೆಳ್ಳಿ ಮೊದಲಾದವುಗಳ ಮೇಲೆ ಕೊರೆಯಲ್ಪಟ್ಟ ಬರಹಗಳು ಶಾಸನಗಳು.

**ಶಾಸನದ ವ್ಯಾಖ್ಯೆಗಳು:**

1. ಕೌಟಿಲ್ಯ : ಶಾಸನ ರಾಜರ ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ.
2. ಆರ್.ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ ಶಾಸನಗಳು ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಮೂಕ ಸಾಕ್ಷಿಗಳು.
3. ಎ.ಎಂ. ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ : ಶಾಸನಗಳು ಆಯಾ ಕಾಲದಲ್ಲಿ ಬರೆದವುಗಳಾಗಿದ್ದು ಲಿಪಿಕಾರರು ಕಾಲಕಾಲಕ್ಕೆ ಮಾಡುವ ತಿದ್ದುಪಡಿಯ ದೋಷವಿಲ್ಲದೆ ಅನೂಚಾನವಾಗಿ ಬಂದ ಮೂಲ ಸಾಮಗ್ರಿಗಳಾಗಿವೆ.

**ಶಾಸನದ ವ್ಯಾಪ್ತಿ:** ಕ್ರಿ.ಶ. 3ನೆಯ ಶತಮಾನದ ಅಶೋಕನ ಶಾಸನಗಳೇ ಭಾರತದಲ್ಲಿ ಅತ್ಯಂತ ಪ್ರಾಚೀನ ಶಾಸನಗಳು. ಇವನ ಕಾಲದಿಂದಲೇ ಕರ್ನಾಟಕದಲ್ಲಿ ಶಾಸನಗಳ ಚರಿತ್ರೆ ಪ್ರಾರಂಭವಾಗುತ್ತದೆ. ಅಶೋಕನ ಶಾಸನಗಳು ಧರ್ಮೋಪದೇಶ ಪರವಾಗಿ ಹೀಗಾಗಿ ಅವುಗಳನ್ನು 'ಧರ್ಮಲಿಪಿ'ಗಳೆಂದು ಕರೆಯಲಾಗಿದೆ. ದಾನ ಮಾಡಿ ಪುಣ್ಯ ಕಟ್ಟಿಕೊಳ್ಳಬೇಕೆಂಬ ಬೌದ್ಧರ ಧರ್ಮಕಟ್ಟಳೆಯಿಂದಾಗಿ ಶಾತವಾಹನರ ಕಾಲದಲ್ಲಿ ಬೌದ್ಧ ಧರ್ಮದ ದಾನ ಶಾಸನಗಳು ಹೆಚ್ಚಾಗಿ ಕಾಣಿಸಿಕೊಂಡವು.

1. ಪ್ರಾಚಾರ್ಯರು, ಗುರುನಾನಕ ಶಿಕ್ಷಣ ಮಹಾವಿದ್ಯಾಲಯ ಬೀದರ.
2. ಸಹಾಯಕ ಪ್ರಾಧ್ಯಾಪಕ, ಕ.ರಾ.ಶಿ. ಸಂಸ್ಥೆಯ ಕರ್ನಾಟಕ ಶಿಕ್ಷಣ ಮಹಾವಿದ್ಯಾಲಯ, ಬೀದರ

PRINCIPAL
Gurunanak College of Education
BIDAR-585403



Scanned with CamScanner

ಕರ್ನಾಟಕದಲ್ಲಿ ಕಲ್ಯಾಣ ಚಾಲುಕ್ಯರ ಮಾಂಡಲೀಕರಾದ ಕಲಚೂರಿ, ಯಾದವ, ಹೊಯ್ಸಳ ಮುಂದೆ ವಿಜಯನಗರ ಅರಸರ ಕಾಲದಲ್ಲಿ ಸಂಖ್ಯಾತ ಶಾಸನಗಳು ಹುಟ್ಟಿಕೊಂಡವು. ತದನಂತರ ಮೈಸೂರು ಅರಸರ ಕಾಲದಲ್ಲಿ ಶಾಸನ ಸಂಪತ್ತು ಇಳಿಮುಖವಾಗುತ್ತ ನಡೆಯಿತು.

ಕನ್ನಡ ನಾಡಿನಲ್ಲಿ ಧರ್ಮ ಶಾಸನಗಳಲ್ಲದೇ ದಾನ ದತ್ತಿಗಳು, ಲೌಕಿಕ ಹಾಗೂ ಪಾರಮಾರ್ಥಿಕ ಪ್ರಯೋಜನಕ್ಕಾಗಿ ಮಡಿದವರ ಸ್ಮಾರಕವಾಗಿ ವೀರ, ಮಾಸ್ತಿ, ನಿಸಿದ ಕಲ್ಲುಗಳು ರಚನೆಗೊಂಡವು. ಹೀಗೆ ಕ್ರಿ.ಶ.ಪೂ. 3ನೆಯ ಶತಮಾನದಿಂದ ರಚನೆಗೊಂಡ ಶಾಸನಗಳಲ್ಲಿ ಕನ್ನಡದ ಮೊದಲ ಶಾಸನವೆಂದು ಖ್ಯಾತಿಯನ್ನು ಪಡೆದು ಕೊಂಡಿರುವುದು ಕ್ರಿ.ಶ. 450ರ ಕದಂಬ ಕಕುಸ್ಥವರ್ಮನ ಹಲ್ಮಿಡಿ ಶಾಸನ. ಇಲ್ಲಿಂದ ಕರ್ನಾಟಕದಲ್ಲಿ ಕನ್ನಡ ಶಾಸನಗಳು ಧರ್ಮ, ದತ್ತಿ, ವೀರ, ತ್ಯಾಗ, ಬಲಿದಾನಗಳ ಸಂಬಂಧವಾಗಿ ಎಲ್ಲೆಂದರಲ್ಲಿ ಸೃಷ್ಟಿಯಾದವು. ಕರ್ನಾಟಕದ ಶಾಸನಗಳ ವಿಪುಲತೆಗೆ ಮೊದಲು ಧರ್ಮವೇ ಮೂಲವೆಂದು ಧಾರಾಳವಾಗಿ ಹೇಳಬಹುದು. ಮುಸಲ್ಮಾನ ರಾಜರ ಕಾಲದಲ್ಲಿ ಆರ್ಯಧರ್ಮದ ಅಳಿಗಾಲದ ಚಿಹ್ನೆಗಳು ಇಸ್ಲಾಂಧರ್ಮದ ಪ್ರಸಾರದ ಕಾಲದಲ್ಲಿ ತಲೆದೋರಿದವು. ಆರ್ಯ(ವೈದಿಕ) ಧರ್ಮಕ್ಕೆ ಅವಶ್ಯವಿದ್ದ ಸ್ಫೂರ್ತಿಯುಕ್ತ ಪೋಷಣೆ ಇಲ್ಲದ್ದರಿಂದ ಆಗ ವೈದಿಕ ಧರ್ಮದ ದೇವಾಲಯಗಳ ಅಳಿಗಾಲವು ಆರಂಭವಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ ಅದು ಸಂಪೂರ್ಣವಾಗಿ ಕೊನೆಗೊಂಡಿತು. ಈ ರೀತಿಯಾಗಿ ದೇವಾಲಯಗಳ ಉಗಮ, ಬೆಳವಣಿಗೆ, ಅಳಿಗಾಲಗಳಿಗನುಗುಣವಾಗಿ ಶಾಸನಗಳು ಹುಟ್ಟಿದವು, ಬೆಳೆದವು ಮತ್ತು ನಷ್ಟವಾದವೆಂದು ಹೇಳಬಹುದು.

**ಶಾಸನದ ಮಹತ್ವ:**

1. ಶಾಸನಗಳು ಕಲ್ಲು, ಲೋಹ ಹಾಗೂ ಕೆಲವು ವಸ್ತುಗಳ ಮೇಲಿನ ಪ್ರಮುಖ ಐತಿಹಾಸಿಕ ಮೂಲಗಳಾಗಿವೆ.
2. ಆರಂಭಿಕ ಅರಸರುಗಳ, ಸಾಮ್ರಾಜ್ಯಗಳ ಅಸ್ತಿತ್ವ ಮತ್ತು ಚಟುವಟಿಕೆಗಳ ಐತಿಹಾಸಿಕ ಪುರಾವೆಗಳು ಶಾಸನಗಳಾಗಿವೆ.
3. ಶಾಸನಗಳು ವಿಶೇಷವಾಗಿ ಪ್ರಾಚೀನ ಕಾಲದ ಭಾರತದ ಇತಿಹಾಸವನ್ನು ಅರಿಯಲು ಒಂದು ಮೂಲಾಧಾರವಾಗಿದೆ.
4. ಶಾಸನಗಳು ಕಾಲ, ಸ್ಥಳ ಮತ್ತು ಪರಿಸ್ಥಿತಿಗಳ ಮಾಹಿತಿಯನ್ನು ಒದಗಿಸುತ್ತದೆ.
5. ಶಾಸನಗಳು ವಾಸ್ತವವಾಗಿ ಇತಿಹಾಸದ ಶಾಶ್ವತವಾದ ದಾಖಲೆಗಳಾಗಿವೆ.

**ಶಾಸನದ ಪ್ರಕಾರಗಳು:**

**ಲೋಹ:**

1. ತಾಮ್ರ: ಪ್ರಾಚೀನ ಕಾಲದಲ್ಲಿ ಶಾಸನಗಳಿಗೆ ಸಂಬಂಧಿಸಿದಂತೆ ತಾಮ್ರ ಅತ್ಯಂತ ಜನಪ್ರಿಯವಾದ ಲೋಹ ಸಾಮಗ್ರಿಯಾಗಿತ್ತು. ತಾಮ್ರಪಟಗಳ ಆಕಾರ ಮುಖ್ಯವಾಗಿ ಕರಡು ಪ್ರತಿಗಳ ಆಕಾರವನ್ನು ಅವಲಂಬಿಸಿರುತ್ತಿತ್ತು. ಕರಡುಪ್ರತಿಗಳು, ತಾಳಪತ್ರಗಳು ಮೇಲಿದ್ದಾಗ, ತಾಮ್ರಪಟಗಳು ಕಿರಿದಾಗಿ ಉದ್ದವಾಗಿರುತ್ತಿದ್ದವು. ಕರಡು ಪ್ರತಿ ಭೂರ್ಜಪತ್ರಗಳ ಮೇಲಿದ್ದಾಗ ಪಟಗಳು ಅಗಲವಾಗಿದ್ದು, ಹೆಚ್ಚು ಕಡಿಮೆ ಚಚ್ಚೌಕವಾಗಿರುತ್ತಿದ್ದವು. ಪ್ರಶಸ್ತಿಯ ಅಂಶ ಹೆಚ್ಚಿದಷ್ಟು ತಾಮ್ರಪಟಗಳ ಆಕಾರ ವಿಸ್ತಾರವಾಗುತ್ತಾ ಹೋಗುತ್ತಿತ್ತು.
2. ಕಬ್ಬಿಣ: ದೆಹಲಿಯ ಬಳಿ ಮೆಹರೌಲಿಯಲ್ಲಿರುವ ಕಬ್ಬಿಣ ಸ್ತಂಭದ ಮೇಲೆ ಚಂದ್ರಗುಪ್ತನ ಶಾಸನವೊಂದಿದೆ. ಅದರ ಕಾಲ ಕ್ರಿ.ಶ.ಸು 415. ಅದು 23 ಅಡಿ 8ಅಂಗುಲ ಎತ್ತರ ಮತ್ತು ಆರು ಟನ್ನುಗಳಿಗಿಂತ ಹೆಚ್ಚು ತೂಕದ್ದೆಂದು ಅಂದಾಜು ಮಾಡಲಾಗಿದೆ. ಅಬುಪರ್ವತದ ಅಚಲೇಶ್ವರ ದೇವಾಲಯದಲ್ಲಿರುವ ಕಬ್ಬಿಣದ ಬೃಹತ್ ತ್ರಿಶೂಲವೊಂದರ ಮೇಲೆ ವಿಕ್ರಮ ಶಕೆ 1468ರ ಶಾಸನವೊಂದು ರಚನೆಗೊಂಡಿದೆ.
3. ಚಿನ್ನ ಮತ್ತು ಬೆಳ್ಳಿ: ಚಿನ್ನ, ಬೆಳ್ಳಿ ಅತ್ಯಂತ ಮೌಲಿಕವಾದ ಲೋಹಗಳಾಗಿದ್ದರಿಂದ ಇವು ಶಾಸನೋದ್ದೇಶಗಳಿಗಾಗಿ ಬಳಕೆಯಾಗಿರುವುದು ಅತೀ ವಿರಳ. ಶ್ರೀಮಂತ ವರ್ತಕರ, ದೊರೆಗಳ ಮತ್ತು ಧಾರ್ಮಿಕ ಸಂಸ್ಥೆಗಳ ವಂಶ ದಾಖಲೆಗಳು ಸುವರ್ಣ ಫಲಕಗಳ ಮೇಲಿರುತ್ತಿದ್ದುವೆಂಬುದಕ್ಕೆ ಬೌದ್ಧ ಸಾಹಿತ್ಯದಲ್ಲಿ ಆಧಾರವಿದೆ. ರಾಜಪತ್ರಗಳನ್ನು, ದತ್ತಿಗಳನ್ನೂ ಇಂಥಹ ಫಲಕಗಳ ಮೇಲೆ ಕೆತ್ತುತ್ತಿದ್ದರೆಂದು ಬ್ಯೂಲರ ಎಂಬ ವಿದ್ವಾಂಸ ಹೇಳುತ್ತಾನೆ. ಬೆಳ್ಳಿಯ ಪಟಗಳ ಮೇಲಿರುವ ಕೆಲವು ಶಾಸನಗಳು ಭಟ್ಟಿಪ್ರೋಲು ಮತ್ತು ತಕ್ಷಶಿಲೆಯಲ್ಲಿ ದೊರೆತಿವೆ. ಮಾಣಿಕಿಯಾಲದ ಒಂದು ಸ್ತೂಪದಲ್ಲಿ ದೊರೆತ ಬೆಳ್ಳಿಯ ಶಾಸನವನ್ನು ಇಲ್ಲಿ ಹೆಸರಿಸಬಹುದು.
4. ಕಂಚು: ತಾಮ್ರಪಟಗಳಿಗೆ ಲಗತ್ತಿಸಲಾಗುತ್ತಿದ್ದ ಬಹುಪಾಲು ಮುದ್ರೆಗಳು ತಾಮ್ರದವುಗಳಾಗಿರದೆ ಕಂಚಿನವಾಗುತ್ತಿರುದ್ದವು ಎಂಬುದು ಗಮನಾರ್ಹವಾದ ಅಂಶ. ಹಲವಾರು ಕಂಚಿನ ವಿಗ್ರಹಗಳ ಪೀಠಗಳ ಮೇಲ್ಭಾಗದಲ್ಲಿ ಶಾಸನಗಳು ಕಂಡುಬರುತ್ತವೆ.
5. ಹಿತ್ತಾಳೆ: ಹಿತ್ತಾಳೆ ಮೇಲಿನ ದಾಖಲೆಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ವರ್ದಕ್‌ದಲ್ಲಿರುವ ಸ್ತೂಪವೊಂದರಲ್ಲಿ ಹಿತ್ತಾಳೆಯ ಒಂದು ಕಲಶದ ಮೇಲ್ಭಾಗದಲ್ಲಿ ಶಾಸನವಿದೆ. ಇದರ ಕಾಲ ಕ್ರಿ.ಪೂ.6. ಗಯಾದ ಸಮೀಪ ದೊರೆತ ಬುದ್ಧನ ಹಿತ್ತಾಳೆ ವಿಗ್ರಹವೊಂದರ ಪೀಠದ ಮೇಲೆ ಶಾಸನವೊಂದಿದೆ. ಆ ಪ್ರತಿಮೆ ದಾನವನ್ನು ಕುರಿತು ಹೇಳುತ್ತದೆ.



PRINCIPAL
Gurunanak College of Education
BIDAR-585403

ISBN No. 978-81-952869-7-3

ಶಿಲೆ

1. **ಬಂಡೆ:** ಬಂಡೆ ಮೇಲಿನ ಶಾಸನಗಳಲ್ಲಿ ಬಹಳ ಪ್ರಸಿದ್ಧವಾದವು ಅಶೋಕನ ಶಾಸನಗಳು. ಕರ್ನಾಟಕದ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರ, ಕೊಪ್ಪಳ ಇಲ್ಲಿಯೂ ಅಶೋಕನ ಬಂಡೆ ಶಾಸನಗಳಿವೆ. ಬಂಡೆಗಳ ಮೇಲಿನ ಇತರ ಗಮನಾರ್ಹ ಶಾಸನಗಳೆಂದರೆ, ಕುಡಿಮಿಯಾಮಲೈ ಶಾಸನ, ಬೆಳಗಾವಿ ಜಿಲ್ಲೆಯ ಎಕ್ಕೇರಿಯಲ್ಲಿರುವ ಇಮ್ಮಡಿ ಪುಲಿಕೇಶಿಯ ಶಾಸನ, ಶ್ರವಣಬೆಳಗೊಳದ ಹಲವಾರು ಶಾಸನಗಳು.
2. **ಸ್ತಂಭ:** ಹಲವಾರು ಶಾಸನಗಳು ಧ್ವಜಸ್ತಂಭ, ಕೀರ್ತಿಸ್ತಂಭ, ಜಯಸ್ತಂಭ ಮತ್ತು ಯೂಪಸ್ತಂಭಗಳ ಮೇಲೆ ಕಂಡುಬರುತ್ತವೆ. ಕ್ರಿ.ಶ. 484ರ ಬುಧಗುಪ್ತನ ಏರಣ್ ಶಾಸನ, ಯಶೋಧರ್ಮನ ಮಂದಸೋರ್ ಶಾಸನ, ಗುಡ್ನಾಪುರ ಶಾಸನ, ಕ್ರಿ.ಶ. 602ರ ಮಂಗಳೇಶನ ಮಹಾಕೂಟ ಶಾಸಮ, ಕ್ರಿ.ಶ. 754ರ ಕೀರ್ತಿವರ್ಮನ ಪಟ್ಟದಕಲ್ಲು ಶಾಸನ, ಶ್ರವಣಬೆಳಗೊಳದಲ್ಲಿರುವ ಕ್ರಿ.ಶ.ಸು. 975ರ ಮಾರಸಿಂಹನ ಮತ್ತು 1129ರ ಮಲ್ಲಿಷೇಣನ ಸಮಾಧಿ ಲೇಖನಗಳು ಸ್ತಂಭಗಳ ಮೇಲಿರುವ ಇನ್ನಿತರ ಮಹತ್ವದ ದಾಖಲೆಗಳಾಗಿವೆ.
3. **ಅವಶೇಷ ಪಾತ್ರೆ:** ಬೌದ್ಧ ಸ್ತೂಪಗಳೊಳಗೆ ದೊರೆತ ಅವಶೇಷ ಪಾತ್ರೆಗಳ ಮೇಲಿನ ಶಾಸನಗಳಲ್ಲಿ ಬಹುಮುಖ್ಯವಾದದ್ದು ಪಿಪ್ರಾವ ದಾಖಲೆ. ಇದು ಉಪಲಬ್ಧ ಭಾರತೀಯ ಶಾಸನಗಳಲ್ಲಿ ಪ್ರಾಚೀನವಾಗಿದ್ದು, ಬುದ್ಧಾವಸಾನವಾದ ಒಂದು ಶತಮಾನದೊಳಗೆ ಹುಟ್ಟಿರಬಹುದು ಎನ್ನಲಾಗಿದೆ.
4. **ಸ್ತೂಪಗಳ ಹೊರಭಾಗ:** ಭಾರೂತ್‌ನಲ್ಲಿರುವ ಸ್ತೂಪದ ಪೂರ್ವದ್ವಾರದ ಸ್ತಂಭದ ಮೇಲಿನ ಶಾಸನ ಧನಭೂತಿಯಿಂದ ದ್ವಾರದ ನಿರ್ಮಾಣವಾಯಿತೆಂಬುದನ್ನು ತಿಳಿಸುತ್ತದೆ. ಸಂಬ ಸಾಂಚಿಯ ಸ್ತೂಪವೊಂದರ ದಕ್ಷಿಣ ದ್ವಾರದ ಮೇಲುತೊರೆಯಲ್ಲಿ ದೊರೆತ ಶಾಸನ ಪ್ರಾಚೀನ ದೊರೆ ಸಿರಿ ಸಾತಕಣಿಯನ್ನು ಹೆಸರಿಸುತ್ತದೆ.
5. **ಗುಹೆ:** ಗುಹೆಗಳ ಮೇಲೆ ಅನೇಕ ಶಾಸನಗಳು ದೊರೆತಿವೆ. ಓರಿಸ್ಸಾದ ಕಟ್ಟಕ್ಕಿನ ಬಳಿಯಿರುವ ಹಾಥಿಗುಂಫ ಗುಹೆಯಲ್ಲಿ ಕಳಿಂಗದ ಖಾರವೆಲನ ಕ್ರಿ.ಪೂ. 156–155ರ ಶಾಸನವೂ ನಾನಾಘಾಟ್ ಕಣಿವೆಯಲ್ಲಿನ ಒಂದು ಗುಹೆಯಲ್ಲಿ, ಶಾತವಾಹನ-ಸಾತಕಣಿ ದೊರೆಯೊಬ್ಬನ ಪತ್ನಿಯಾದ ರಾಣಿ ನಾಯನಿಕೆಯ ಶಾಸನವು ದೊರೆತಿವೆ.
6. **ಪ್ರತಿಮೆ:** ಪ್ರತಿಮೆಗಳ ಪೀಠಗಳು ಮೊದಲಾದ ಭಾಗಗಳ ಮೇಲೆ ಕಂಡು ಬಂದಿರುವ ಶಾಸನಗಳು ವಿಶೇಷವಾಗಿ ಗಮನಾರ್ಹವಾದವುಗಳಾಗಿವೆ. ಮಂಕುವಾರಿನ ಬುದ್ಧ ಪ್ರತಿಮೆಯ ಪೀಠದ ಮೇಲಿರುವ 1ನೆಯ ಕುಮಾರಗುಪ್ತನ ಕಾಲದ ಕ್ರಿ.ಶ. 448ರ ಶಾಸನ, ಶಾಹಪುರದಲ್ಲಿರುವ ಸೂರ್ಯ ಪ್ರತಿಮೆಯೊಂದರ ಪೀಠದ ಮೇಲಿರುವ ಆದಿತ್ಯಸೇನನ ಕಾಲದ ಕ್ರಿ.ಶ. 672ರ ಶಾಸನ ಮೊದಲಾದವು. ಇವಲ್ಲದೆ ಶ್ರವಣಬೆಳಗೊಳ, ವೇಣೂರ ಮತ್ತು ಕಾರ್ಕಳಗಳಲ್ಲಿರುವ ಗೊಮ್ಮಟ ವಿಗ್ರಹಗಳ ಮೇಲೂ ಶಾಸನಗಳಿವೆ.

**ಪದವಿ ಹಂತದಲ್ಲಿ ಶಾಸನೋಕ್ತ ದಾಖಲೆಗಳ ಬೋಧನೆ:**

ಪದವಿ ಹಂತದ ಇತಿಹಾಸ ಬೋಧನೆಯಲ್ಲಿ ಶಾಸನಗಳ ಬೋಧನೆ ಅತ್ಯಂತ ಪ್ರಮುಖವಾದುದ್ದಾಗಿದೆ. ಏಕೆಂದರೆ ಇತಿಹಾಸಕ್ಕೆ ವೈಜ್ಞಾನಿಕ ನೆಲೆಗಟ್ಟನ್ನು ಒದಗಿಸುವುದೇ ಈ ಶಾಸನಗಳು. ಅವುಗಳ ವ್ಯವಸ್ಥಿತ ಅಧ್ಯಯನದಿಂದ ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ದೃಷ್ಟಿಕೋನವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಬೆಳೆಸುವುದು ಸಾಧ್ಯ. ಶಾಸನಗಳ ಬೋಧನೆಯು ಶಾಸನಗಳ ವಿಶ್ಲೇಷಣೆ ಹಾಗೂ ಅವುಗಳ ವ್ಯವಸ್ಥಿತ ವರ್ಗಾವಣೆಯನ್ನು ಅವಲಂಬಿಸಿದೆ. ಆದ್ದರಿಂದ ಶಾಸನಗಳ ವಿಶ್ಲೇಷಣೆಯನ್ನು ಅರ್ಥವತ್ತಾಗಿ ಮಾಡಿ ಅದಕ್ಕನುಗುಣವಾಗಿ ಅದನ್ನು ವಿಶದೀಕರಿಸುವುದು ಅತ್ಯಗತ್ಯ.

**ಶಾಸನಗಳ ವಿಶ್ಲೇಷಣೆ:**

| ಶಾಸನ | ಕಾಲ | ಕರ್ತೃ | ಮಾಹಿತಿ |
|---|---|---|---|
| ತಾಳಗುಂದ ಶಾಸನ | ಕ್ರಿ.ಶ.ಸು. 370–450 | – | ವಜಿನಾಗ ಎಂಬ ಅಂಬಿಗನಿಗೆ ಕದಂಬ ದೊರೆಯು ಭೂಮಿಯನ್ನು ಇನಾಮು ನೀಡಿದ್ದ ಅಂಶವನ್ನು ಈ ಶಾಸನ ವಿವರಿಸುತ್ತದೆ. |
| ಹಲ್ಮಿಡಿ ಶಾಸನ | ಕ್ರಿ.ಶ.ಸು. 450 | ಕಾಕುತ್ಸ ವರ್ಮ | ಹಲ್ಮಿಡಿ ಶಾಸನದಲ್ಲಿ ಗುಣ ಪಶುಪತಿ ಮತ್ತು ವಿಜಯರಸನ ವರ್ಣನೆ. ವೀರರ ಪರಾಕ್ರಮದ ವರ್ಣನೆ ಅದು ಪ್ರಾಚೀನ ಕನ್ನಡಿಗರ ಬದುಕಿನ ಮೌಲ್ಯವನ್ನು ಆದರ್ಶ ಜೀವನವನ್ನು ಕರ್ನಾಟಕ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ವೀರರ ವಿಜಯವನ್ನು ಸಾರುವ ವೀರಗಲ್ಲು. |

PRINCIPAL
Gurunanak College of Education
BIDAR-585403



Scanned with CamScanner

| | | | |
|---|---|---|---|
| ಶ್ರವಣಬೆಳಗೊಳ ಶಾಸನ | ಕ್ರಿ.ಶ. 1368 | ವೀರ ಬುಕ್ಕರಾಯ | ಜೈನ ಮತ್ತು ಶ್ರೀ ವೈಷ್ಣವರ ವ್ಯಾಜ್ಯವನ್ನು ಪರಿಹರಿಸಿದ ರೀತಿ ಈ ಶಾಸನದಲ್ಲಿ ಅನುಕರಣೀಯವಾಗಿದೆ. ಈ ಶಾಸನದಿಂದ ಜೈನರಿಗೆ ಪಂಚಮಹಾವಾದ್ಯ ಮತ್ತು ಕಳಶದ ಗೌರವವನ್ನು ಶ್ರೀ ವೈಷ್ಣವರು ಕಿತ್ತುಕೊಂಡಿದ್ದರೆಂದೂ ಬುಕ್ಕರಾಯನು ಅದನ್ನು ಕೊಡಿಸಿದನೆಂದು ತಿಳಿಯುತ್ತದೆ. |
| ಬೆಳತೂರು ಶಾಸನ | ಕ್ರಿ.ಶ. 1057 | ದೇವಕಬ್ಬೆ | ದೇವಕಬ್ಬೆಯನ್ನು 'ರವಿಗನ ಕುಲದೀಪಿಕೆ' ಎಂದು ಕುಲಮತ್ರ ಎಂದು ಕರೆದಿರುವುದು, ಎಲ್ಲರೂ ಬಂದು ಸಹಗಮನ ಮಾಡಬೇಡವೆಂದು ಬೇಡಿಕೊಂಡಷ್ಟು ಅವಳ ನಿರ್ಧಾರ ದೃಢವಾದದ್ದು, ಎಲ್ಲವನ್ನು ಬಿಟ್ಟುಕೊಟ್ಟು, ಕೈ ಮುಗಿದುಕೊಂಡು ಅಗ್ನಿ ಪ್ರವೇಶ ಮಾಡುವ ಚಿತ್ರಣ ಈ ಶಾಸನ ನೀಡುತ್ತದೆ. |
| ಲಕ್ಕುಂಡಿ ಶಾಸನ | ಕ್ರಿ.ಶ. 1007 | ಅತ್ತಿಮಬ್ಬೆ | ಇಮ್ಮಡಿ ತೈಲಪ ಮತ್ತು ಇರಿವಬೆಡಂಗ ಸತ್ಯಾಶ್ರಯ ಚಕ್ರವರ್ತಿಗಳ ರಾಜಶಕ್ತಿಗೆ ಆಧಾರಸ್ತಂಭವಾಗಿದ್ದ ಶ್ರೇಷ್ಠ ದಂಡನಾಯಕರ ಪರಿಚಯ ಈ ಶಾಸನದಲ್ಲಿದೆ. ಮತ್ತು ಇವರೆಲ್ಲರು ಅತ್ತಿಮಬ್ಬೆಯ ಬಳಗವೆಂಬುದು ಗಮನಾರ್ಹವಾಗಿದೆ. |
| ಕುವರಲಕ್ಷ್ಮನ ಶಾಸನ | ಕ್ರಿ.ಶ.ಸು. 1220 | ಕುವರಲಕ್ಷ್ಮನ | ಈ ಶಾಸನ ಕುವರಲಕ್ಷ್ಮನಿಗೂ ಬಲ್ಲಾಳನಿಗೂ ಇದ್ದ ಅನ್ಯೋನ್ಯ ಸಂಬಂಧವನ್ನು ಹಾಗೂ ಕುವರಲಕ್ಷ್ಮನ ಹೆಂಡತಿಯಾದ ಸುಗ್ಗಲದೇವಿಯ ಪಾತಿವ್ರತ್ಯ ಗುಣಗಳನ್ನು ಎತ್ತಿ ಹೇಳುತ್ತದೆ. |
| ಆತಕೂರ ಶಾಸನ | ಕ್ರಿ.ಶ. 950 | ಮಣಲರತ | ಒಂದು ದಿನ ಕೆಳಲೆನಾಡ ಬೆಳತೂರು ಹಳ್ಳಿಯ ಪಶ್ಚಿಮದ ಬೆಟ್ಟದಲ್ಲಿ ನಾಯಿ ದೊಡ್ಡಹಂದಿಯೊಡನೆ ಕಾದಿ, ಅದನ್ನು ಕೊಂದು ತಾನೂ ಸತ್ತಿತು. ಮಣಲರತ ನಾಯಿಯ ಸ್ಮಾರಕವಾಗಿ ಆತಕೂರಿನಲ್ಲಿ ವೀರಗಲ್ಲು ನಿಲ್ಲಿಸಿದನು. |

ಶಾಸನಗಳನ್ನು ವಿಶ್ಲೇಷಿಸಿದ ನಂತರ ಅವುಗಳನ್ನು ಅವುಗಳ ವಿವಿಧ ಆಯಾಮಗಳಿಗೆ ಅನುಗುಣವಾಗಿ ವಿಶದೀಕರಿಸುವುದು– ಪ್ರತಿಯೊಂದು ಶಾಸನವು ಶಾಸನದ ಹೆಸರು, ಕಾಲ, ಕರ್ತೃ ಹಾಗೂ ಶಾಸನವು ಪ್ರಚುರಪಡಿಸುವ ಮಾಹಿತಿಗಳನ್ನು ಅನುಕ್ರಮವಾಗಿ ಜೋಡಿಸುವುದು. ಆ ಮೂಲಕ ಪ್ರತಿಯೊಂದು ಶಾಸನವನ್ನು ಕುರಿತಾದ ಮಾಹಿತಿಯನ್ನು ಇಡೀಯಾಗಿ ವಿದ್ಯಾರ್ಥಿಗಳಿಗೆ ಪರಿಚಯಿಸುವುದು. ಇದು ಪ್ರತಿಯೊಂದು ಪ್ರಕಾರದ ಶಾಸನಗಳಿಗೂ ಅಳವಡಿಸಿಕೊಳ್ಳಬಹುದು. ಕೊನೆಯಲ್ಲಿ ಇವುಗಳ ಎಲ್ಲಾ ಶಾಸನಗಳನ್ನು ಒಳಗೊಂಡ ಕೋಷ್ಟಕವನ್ನು ರಚಿಸಿ ಸಮಗ್ರ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು.

**ಉಪಸಂಹಾರ:**

ಶಾಸನಬವೆಂಬುದು ಆಜ್ಞೆ, ಪ್ರಜೆಗಳೆಲ್ಲರೂ ಪಾಲಿಸಬೇಕಾದ ಒಂದು ಸಂಹಿತೆ, ಸಂವಿಧಾನ. ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗುತ್ತೀರೆಂಬ ಎಚ್ಚರಿಕೆಯ ನೀತಿ ಸಂಹಿತೆಗಳು ಎಂಬ ಅರ್ಥ ಪಡೆದುಕೊಂಡಿತು. ಶಾಸನಗಳು ಆಯಾ ಕಾಲದಲ್ಲಿ ಬರೆದವುಗಳಾಗಿದ್ದು ಲಿಪಿಕಾರರು ಕಾಲಕಾಲಕ್ಕೆ ಮಾಡುವ ತಿದ್ದುಪಡಿಯ ದೋಷವಿಲ್ಲದೆ ಅನೂಚಾನವಾಗಿ ಬಂದ ಮೂಲ ಸಾಮಗ್ರಿಗಳಾಗಿವೆ. ಶಾಸನಗಳು ವಾಸ್ತವವಾಗಿ ಇತಿಹಾಸದ ಶಾಶ್ವತವಾದ ದಾಖಲೆಗಳಾಗಿವೆ.

**ಆಧಾರ ಗ್ರಂಥಗಳು:**

1. ಕನ್ನಡ ಶಾಸನಗಳ ಅಧ್ಯಯನ – ಎಸ್.ಎಸ್. ಭಗವತಿ, ಎಚ್.ಎಸ್. ಮೇಲಿನಮನಿ.
2. ಕರ್ನಾಟಕದ ವೀರಗಲ್ಲುಗಳು – ಶೇಷಶಾಸ್ತ್ರಿ ಆರ್.
3. ಶಾಸನಾಧ್ಯಯನ – ಹಿರೇಮಠ ಎಸ್.ಎಂ.
4. ಶಾಸನ ಪರಿಚಯ – ಶೇಷಶಾಸ್ತ್ರಿ ಆರ್.

PRINCIPAL
Gurunanak College of Education

ISBN No. 978-81-952869-7-1

# ವಚನ ಸಾಹಿತ್ಯದಲ್ಲಿ ವ್ಯಕ್ತಿತ್ವ ವಿಕಸನ

ಜಗನ್ನಾಥ ಕಮಲಾಪೂರೆ[1] ಮತ್ತು ಡಾ. ರಾಜಶೇಖರ ಅಷ್ಟೂರೆ[2]

ಉದ್ದೇಶಗಳು :

- ವ್ಯಕ್ತಿತ್ವದ ಪರಿಕಲ್ಪನೆಯನ್ನು ಅರ್ಥೈಸುವುದು.
- ವಚನ ಸಾಹಿತ್ಯವನ್ನು ಅರ್ಥೈಸುವುದು.
- ವ್ಯಕ್ತಿತ್ವ ವಿಕಸನ ಪ್ರಕ್ರಿಯೆಯಲ್ಲಿ ವಚನಗಳ ಪಾತ್ರದ ವಿಶ್ಲೇಷಣೆ

ಮೂಲಾಂಶಗಳು: ವಚನ, ವ್ಯಕ್ತಿತ್ವ, ವಿಕಸನ.

**ಪ್ರಸ್ತಾವನೆ:**

12ನೇ ಶತಮಾನವು ಹೊಸ ಕ್ರಾಂತಿಯನ್ನು ಉಂಟು ಮಾಡಿದ ಕಾಲವದು. ಆರ್ಥಿಕ, ಸಾಮಾಜಿಕ, ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮುಂತಾದವುಗಳು ವಚನ ಸಾಹಿತ್ಯದ ಮೂಲಕ ಬಿತ್ತಿ ಬೆಳೆಸಿದ ಶ್ರೇಯಸ್ಸು 12ನೇ ಶತಮಾನದ ಶರಣರಿಗೆ ಸಲ್ಲುತ್ತದೆ. ವಚನಗಳು ಇಂದು, ಮುಂದು ಮತ್ತು ಎಂದೆಂದಿಗೂ ಪ್ರಸ್ತುತವೆನಿಸುತ್ತವೆ.

ಮನೋವಿಜ್ಞಾನದಲ್ಲಿ "ವ್ಯಕ್ತಿತ್ವ" ಎಂಬ ಪದವು ಅತ್ಯಂತ ವ್ಯಾಪಕವಾದ ಅರ್ಥವನ್ನು ಹೊಂದಿರುವುದು. ಮನಃಶಾಸ್ತ್ರಜ್ಞರ ಅಭಿಮತದಂತೆ ವ್ಯಕ್ತಿತ್ವವು ವ್ಯಕ್ತಿಯ ದೈಹಿಕ, ಮಾನಸಿಕ, ಬೌದ್ಧಿಕ, ಸಂವೇಗಾತ್ಮಕ, ಸಾಮಾಜಿಕ ಐಚ್ಛಿಕ ಮುಂತಾದ ಎಲ್ಲ ಗುಣಗಳನ್ನು ಅದು ಒಳಗೊಂಡಿರುತ್ತದೆ.

ವ್ಯಕ್ತಿಯನ್ನು ಸ್ಮರಿಸಿದಾಗ ನಮ್ಮ ಮನದಲ್ಲಿ ಅವನ ದೈಹಿಕ ರೂಪ ಬಂದರೂ ಅದಕ್ಕೆ ಮಹತ್ವ ನೀಡದೆ, ಅವನನ್ನು ಪ್ರತಿನಿಧಿಸುವ ಗುಣಗಳಿಗೆ ಅಥವಾ ಅಂಶಗಳಿಗೆ ಮಹತ್ವ ನೀಡುತ್ತೇವೆ. ಧರ್ಮರಾಜನೆಂದಾಕ್ಷಣ ಧರ್ಮ ಬುದ್ಧಿ, ಹರಿಶ್ಚಂದ್ರನೆಂದಾಕ್ಷಣ ಸತ್ಯ ನಿಷ್ಠೆ, ಕರ್ಣನೆಂದಾಗ ದಾನಶೂರತೆ, ಮುಂತಾದ ಗುಣಗಳಿಂದ ಆ ವ್ಯಕ್ತಿಗಳ ವ್ಯಕ್ತಿತ್ವ ಪರಿಚಯವಾಗುವುದು. ಹೀಗೆ ವ್ಯಕ್ತಿಯು ತಾನೇ ತನ್ನನ್ನು ಅರ್ಥ ಮಾಡಿಕೊಳ್ಳುವಂತೆ ಇತರರನ್ನು ಅರ್ಥ ಮಾಡಿಕೊಂಡು ಅವರ ಬಗ್ಗೆ ಅಭಿಪ್ರಾಯವೊಂದು ರೂಪಿತವಾಗುವುದು ಅದೇ ವ್ಯಕ್ತಿತ್ವವಾಗುತ್ತದೆ.

ಇಲ್ಲಿ ವ್ಯಕ್ತಿ ಎಂದಾಗ ದೈಹಿಕ ದೃಷ್ಟಿಯಿಂದ ವಿಕಾಸಗೊಂಡವನು ಎಂದರ್ಥ. ದೇಹವು ರೋಗರುಜಿನಗಳಿಗೆ ಬಲಿಯಾಗುವ ಅಪಾಯವಿರುವುದರಿಂದ ಸ್ವಾಮಿ ವಿವೇಕಾನಂದರು ಹೇಳುವಂತೆ ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸಿರುತ್ತದೆ ಎನ್ನುವಂತೆ ವ್ಯಕ್ತಿಯ ಆಕಸ್ಮಿಕ ಸಾವನ್ನು ನಾವು ದೊಡ್ಡ ದುರಂತ ಎಂದು ಚಿಂತಿಸುತ್ತೇವೆ. ಆದರೆ ನಾವು ಬದುಕಿರುವಾಗಲೇ ನಮ್ಮ ಅಂತರಂಗವನ್ನು ನಿರ್ಜೀವಗೊಳಿಸುತ್ತೇವೆ. ಇದು ಬದುಕಿನ ಅತಿದೊಡ್ಡ ದುರಂತ.

**ವಚನಗಳಲ್ಲಿ ವ್ಯಕ್ತಿತ್ವ ವಿಕಾಸ:**

12ನೇ ಶತಮಾನದ ಬಸವಾದಿ ಶರಣರು ವ್ಯಕ್ತಿಯ ವ್ಯಕ್ತಿತ್ವ ಹಾಗೂ ಇಡೀ ಸಮಾಜವನ್ನು ವಿಕಾಸಗೊಳಿಸುವ ಸಿದ್ಧಾಂತವನ್ನು ತಮ್ಮ ಅನೇಕ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

"ಆನೆಯನೇರಿಕೊಂಡು ಹೋದಿರೇ ನೀವು
ಕುದುರೆಯನೇರಿಕೊಂಡು........
ಕುಂಕುಮ ಕಸ್ತೂರಿ ಪೂಸಿಕೊಂಡು ಹೋದಿರೆ ಅಣ್ಣಾ
ಸತ್ಯದ ನಿಲವನರಿಯದೆ ಹೋದಿರಲ್ಲ
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ"

ಭೌತಿಕ ಸಂಪತ್ತಿನಿಂದ ವ್ಯಕ್ತಿ ವಿಕಾಸವಾಗಿರುವುದನ್ನು ವ್ಯಕ್ತಿತ್ವ ವಿಕಾಸವಾಗದೇವಿರುವುದನ್ನು ಬಸವಣ್ಣನವರ ಈ ವಚನಗಳಿಂದ ತಿಳಿದುಬರುತ್ತದೆ.

---

1. ಸಹ-ಪ್ರಾಧ್ಯಾಪಕರು, ಕ.ರಾ.ಶಿ ಸಂಸ್ಥೆಯ, ಕರ್ನಾಟಕ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ.) ಬೀದರ.
2. ಪ್ರಾಚಾರ್ಯರು, ಗುರುನಾನಕ ಶಿಕ್ಷಣ ಮಹಾವಿದ್ಯಾಲಯ ಬೀದರ.

PRINCIPAL
Gurunanak College of Education
BIDAR-585403



Scanned with CamScanner

"ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ ಕಾಮಿನಿ
ನಿನ್ನವಳಲ್ಲ
ಅವು ಜಗಕ್ಕಿಕ್ಕಿದ ವಿಧಿ
ನಿನ್ನೊಡವೆ ಎಂಬುದು ಜ್ಞಾನರತ್ನ
ಅಂತಪ್ಪ ದಿವ್ಯ ರತ್ನವ ಕೆಡಗುಡದೆ
ಆ ರತ್ನವ ನೀನು ಅಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ ಎಲೆ ಮನವೇ"

ಜಗತ್ತಿನ ಯಾವುದೇ ಭೌತಿಕ ಸಂಪತ್ತು ನಮ್ಮದಾಗಿರುವುದಿಲ್ಲ ಜ್ಞಾನವೇ ನಮ್ಮ ನಿಜವಾದ ಸಂಪತ್ತು ಅದನ್ನು ಅಲಂಕರಿಸಿದವನು ನಿಜವಾದ ಸಿರಿವಂತ ಅವನದು ನಿಜವಾದ ವ್ಯಕ್ತಿತ್ವ ವಿಕಾಸವೆಂದು ಅಲ್ಲಮಪ್ರಭುಗಳ ವಚನದಿಂದ ತಿಳಿದುಬರುತ್ತದೆ.

ವ್ಯಕ್ತಿತ್ವದ ಪ್ರಮುಖ ಅಂಶಗಳೆಂದರೆ "ಸದಾಚಾರ ಮತ್ತು ಸದ್ಭಾವನೆಗಳು" ಇವು ಹೇಗಿರಬೇಕೆಂಬುದನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ಶರಣರು ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ.

"ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ
ಅವರಾರಾಧನೆ ದಂಡ ಭೂಭಾರಕರು
ಅವರಿಗೆ ಪ್ರಾಯಶ್ಚಿತ ತವೆಂಬುದಿಲ್ಲ"

ನಮ್ಮ ವ್ಯಕ್ತಿತ್ವದಲ್ಲಿ ಮಹತ್ವದ ಪಾತ್ರವಹಿಸುವ ಒಂದು ಅಂಶವೆಂದರೆ ನಾವಾಡುವ ಭಾಷೆ, ನಮ್ಮ ವ್ಯಕ್ತಿತ್ವಕ್ಕೆ ಮೆರುಗು ತಂದು ಕೊಟ್ಟು ನಮ್ಮಲ್ಲಿ ಸಕಲ ಸಾಧನೆಗಳಿಗೆ ಪೂರಕವಾಗುವುದು ನಾವಾಡುವ ಮಾತು

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು

ಈ ವಚನವು ಭಾಷೆಯ ಗುಣ ಹೇಗಿರಬೇಕೆಂಬುದನ್ನು ತಿಳಿಸುತ್ತದೆ.

ವ್ಯಕ್ತಿತ್ವದ ಬುನಾದಿ ಪ್ರಾರಂಭವಾಗುವುದು ಬಾಲ್ಯದಲ್ಲಿ ಅತಿ ಮುದ್ದಿನಿಂದ ಬೆಳೆದ ಮಗು ಹರೆಯಕ್ಕೆ ಬಂದಂತೆ ಕೋಪ ಸ್ವಾರ್ಥ, ಹಗೆತನ ಪ್ರದರ್ಶಿಸುತ್ತದೆ. ಈ ವಚನದಲ್ಲಿ ಬಸವಣ್ಣನವರು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ.

"ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ.....
ಅಯ್ಯೋನೊಂದೆನು ಸೈರಿಸಲಾರೆನು"

ಮನೋವೈಜ್ಞಾನಿಕ ದೃಷ್ಟಿಯಿಂದ ಈ ವಚನವು ವಿಶ್ಲೇಷಿಸಿದಾಗ ಅತಿ ಮುದ್ದಿನಿಂದ ಸಾಕಿದ ಮಕ್ಕಳು ಅಹಂಕಾರದಿಂದ ತಮ್ಮದೇ ದೊಡ್ಡ ಪ್ರಪಂಚವೆಂದು ಅವರಲ್ಲಿ ವ್ಯಕ್ತಿತ್ವ ವಿಕಾಸ ಹೊಂದದೆ ಕೂಪ ಮಂಡೂಕದ ನಡವಳಿಕೆಗಳನ್ನು ಪ್ರದರ್ಶಿಸುತ್ತಾರೆ.

ಮಕ್ಕಳ ವ್ಯಕ್ತಿತ್ವ ವಿಕಾಸದಲ್ಲಿ ಪೋಷಕರ ನಡೆ ನುಡಿಗಳು ಪ್ರಭಾವ ಬೀರುತ್ತವೆ. ಏಕೆಂದರೆ ಮಕ್ಕಳು ಪೋಷಕರ ಕ್ರಿಯಾಚರಣೆಗಳನ್ನು ಆಸ್ಥೆಯಿಂದ ನೋಡುತ್ತಾರೆ. ಆದ್ದರಿಂದ ಪೋಷಕರ ವರ್ತನೆ ವ್ಯಕ್ತಿತ್ವ ವಿಕಾಸದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

"ಭಕ್ತಿ ಸುಭಾಷೆಯ ನುಡಿಯ ನುಡಿವೆ
ನುಡಿದಂತೆ ನಡೆವೆ.......! ಎಂಬ

ಈ ವಚನವು ಪರೋಕ್ಷವಾಗಿ ಪೋಷಕರಿಗೆ ಅನ್ವಯವಾಗುವಂಥದ್ದು.

ಮನುಷ್ಯ ಒಳಗೊಂದು ರೀತಿ ಹೊರಗೊಂದು ರೀತಿಯಾಗಿ ಬದುಕಬಾರದು, ನಡೆನುಡಿಗಳಲ್ಲಿ ಒಂದಾದ ನಿರಾಳ ಬದುಕು ಅವನಾದಗಬೇಕು ಆತನು ಸ್ಥಿತಪ್ರಜ್ಞನಾಗಿರಬೇಕು. ಅಂದಾಗ ಮಾತ್ರ ವ್ಯಕ್ತಿತ್ವ ವಿಕಾಸವಾಗುತ್ತದೆ ಎಂಬುದು ಬಸವಣ್ಣನವರು ಹೀಗೆ ಹೇಳುತ್ತಾರೆ.

"ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ
ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯ

PRINCIPAL
Gurunanak College of Education
BIDAR-585403

ISBN No. 978-81-952869-

ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲ ಸಂಗಮದೇವರನೊಳಗಪ್ಪನಯ್ಯ"

ವ್ಯಕ್ತಿತ್ವ ವಿಕಾಸಕ್ಕೆ ನೈತಿಕತೆಯೇ ಆಧಾರ ಅನೈತಿಕ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ವಿಕಾಸ ಮಾಡಿಕೊಳ್ಳಲು ಸಾಧ್ಯವೇ ಇಲ್ಲ.

"ದುರ್ವ್ಯಸನ ದುರಾಚಾರಿ ಎಂದೆನಿಸದಿರಯ್ಯ, ಎನ್ನ
ಲಿಂಗವೆಸನಿ ಜಂಗಮ ಪ್ರೇಮಿ ಎಂದೆನಿಸಯ್ಯ

**ಉಪಸಂಹಾರ :**

ಈ ಎಲ್ಲ ವಚನಗಳಲ್ಲಿ ವ್ಯಕ್ತಿಯ ಮನಸ್ಸನ್ನು ವಿಕಾಸ ಪ್ರಕ್ರಿಯೆಗೆ ಎಷ್ಟು ಮುಖ್ಯವಾಗಿವೆ ಎಂಬುದನ್ನು ಗಮನಿಸಬೇಕು. ವಚನಗಳ ವ್ಯಕ್ತಿತ್ವ ವಿಕಸನ ದೃಷ್ಟಿಯಿಂದ ನೋಡಿ ಅವುಗಳನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಂಡು ವಿಕಸನದ ಹಾದಿ ಮುನ್ನಡೆಯೋಣ.

**ಆಕರ ಕೃತಿಗಳು :**


- ಡಾ॥ ಎಸ್.ಎಸ್. ಪಾಟೀಲ್ : ವಚನಗಳಲ್ಲಿ ವೈದ್ಯವಿಜ್ಞಾನ
- ಅರವಿಂದ ಜತ್ತಿ : ವಚನ ಸಾಹಿತ್ಯದಲ್ಲಿ ವ್ಯಕ್ತಿತ್ವ ವಿಕಸನ
- ಬಸವ ದೀಪ್ತಿ : ದೇ. ಆವರೇಗೌಡ, ಬಿ.ಬಿ ಪೂಜಾರಿ
- ಬಸವ ಪ್ರಭೆ : 72ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಬೀದರ


PRINCIPAL
Gurunanak College of Education
BIDAR-585403